‘ಧಾರ್ಮಿಕ ಕೃತಿಗಳ ಶಾಸ್ತ್ರ’ ಗ್ರಂಥಮಾಲಿಕೆ : ದೇವರ ಪೂಜೆ - ಖಂಡ ೩

# ಪೂಜೆಯ ಮೊದಲಿನ ವೈಯಕ್ತಿಕ ತಯಾರಿ

## (ಶಾಸ್ತ್ರಸಹಿತ)

(Individual preparation required before ritualistic worship
[With the underlying spiritual science] - ಕನ್ನಡ [Kannada])


**ಸಂಕಲನಕಾರರು**

**ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷಕರು**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

**ಸೂಕ್ಷ್ಮಜ್ಞಾನ ಪಡೆದವರು**

**ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಮುಕುಲ ಗಾಡಗೀಳ ಮತ್ತು ಇತರರು**



**ಸನಾತನ ಸಂಸ್ಥೆ**


**ಸನಾತನದ ಗ್ರಂಥಸಂಪತ್ತಿನ ಅದ್ವಿತೀಯತೆ !**

ಸನಾತನದ ಬಹುತೇಕ ಗ್ರಂಥಗಳಲ್ಲಿನ ಸುಮಾರು ಶೇ. ೨೦ ರಷ್ಟು ಬರವಣಿಗೆಗಳು ‘ಸೂಕ್ಷ್ಮದಿಂದ ಪಡೆದುಕೊಂಡ ದಿವ್ಯ ಜ್ಞಾನ’ವಾಗಿದ್ದು, ಪೃಥ್ವಿಯಲ್ಲಿ ಲಭ್ಯವಿರುವ ಜ್ಞಾನದ ತುಲನೆಯಲ್ಲಿ ಅದು ಅದ್ವಿತೀಯವಾಗಿದೆ !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ವಿ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ :** ಸೌ. ಜಾಹ್ನವಿ ಶಿಂದೆ ಮತ್ತು ಸೌ. ಆರತಿ ಪುರಾಣಿಕ

ಪ್ರಸ್ತುತ ಗ್ರಂಥದ 'ಪೂಜೆಯ ಮೊದಲು ಮಾಡಬೇಕಾದ ವೈಯಕ್ತಿಕ ತಯಾರಿ' ಎಂಬ ಮೂಲ ಹೆಸರನ್ನು ಮೂರನೆಯ ಆವೃತ್ತಿಯಿಂದ (ನವೆಂಬರ್ ೨೦೧೪) 'ಪೂಜೆಯ ಮೊದಲಿನ ವೈಯಕ್ತಿಕ ತಯಾರಿ (ಶಾಸ್ತ್ರಸಹಿತ)' ಎಂದು ಬದಲಿಸಲಾಗಿದೆ.

**First Edition** : Mahashivaratri, Kaliyug Varsh 5110
(23rd February 2009)

**Fourth Edition** : Navaratrarambha, Kaliyug Varsh 5125
(15th October 2023)

**ಇಂದಿನವರೆಗೆ ಗ್ರಂಥದ 6,780 ಪ್ರತಿಗಳು ಪ್ರಕಾಶಿತಗೊಂಡಿವೆ !**

Translated from the original Marathi text 'Pujepurvichi vaiyaktik Siddhata (Shastrasaha)'
ಪ್ರಸ್ತುತ ಗ್ರಂಥವು ಹಿಂದಿ ಮತ್ತು ಆಂಗ್ಲ ಭಾಷೆಗಳಲ್ಲೂ ಲಭ್ಯವಿದೆ.

**ಅನುವಾದಕರು** : ಶ್ರೀ. ನಾಗೇಂದ್ರಪ್ಪ, ಶ್ರೀಮತಿ ಅಶ್ವಿನಿ ಪ್ರಭು,
ಡಾ. ಪ್ರಕಾಶ ಘಾಳಿ

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 120/-

**ISBN :** 978-93-92952-96-8 ॐ ಗ್ರಂಥ ಕ್ರ. : 129

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ಗ್ರಂಥದ ಸಂಕಲನಕಾರರ ಪರಿಚಯ

# ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆಯವರ ಅದ್ವಿತೀಯ ಕಾರ್ಯ ಮತ್ತು ವೈಶಿಷ್ಟ್ಯಗಳ ಸಂಕ್ಷಿಪ್ತ ಪರಿಚಯ !



೧. ಅಧ್ಯಾತ್ಮಪ್ರಸಾರಕ್ಕಾಗಿ 'ಸನಾತನ ಸಂಸ್ಥೆ'ಯ ಸ್ಥಾಪನೆ

೨. ಶೀಘ್ರ ಈಶ್ವರಪ್ರಾಪ್ತಿಗಾಗಿ 'ಗುರುಕೃಪಾಯೋಗ' ಎಂಬ ಸಾಧನಾಮಾರ್ಗದ ನಿರ್ಮಿತಿ : ಇದಕ್ಕನುಸಾರ ಸಾಧನೆ ಮಾಡಿ ೩.೯.೨೦೨೩ ರವರೆಗೆ ೧೨೫ ಸಾಧಕರು ಸಂತರಾಗಿದ್ದು, ೧,೦೪೬ ಸಾಧಕರು ಸಂತತ್ವದೆಡೆಗೆ ಮಾರ್ಗಕ್ರಮಣ ಮಾಡುತ್ತಿದ್ದಾರೆ.

೩. ಆಚಾರಧರ್ಮಪಾಲನೆ, ದೇವತೆಗಳು, ಸಾಧನೆ, ಆದರ್ಶ ರಾಷ್ಟ್ರನಿರ್ಮಾಣ, ಧರ್ಮರಕ್ಷಣೆ ಇತ್ಯಾದಿ ವಿವಿಧ ವಿಷಯಗಳ ಬಗ್ಗೆ ವಿಪುಲ ಗ್ರಂಥಗಳ ನಿರ್ಮಿತಿ

೪. ಹಿಂದುತ್ವವಾದಿ ವರ್ತಮಾನಪತ್ರಿಕೆ 'ಸನಾತನ ಪ್ರಭಾತ'ದ ಸಂಸ್ಥಾಪಕ-ಸಂಪಾದಕರು

೫. ಹಿಂದೂ ರಾಷ್ಟ್ರದ (ಈಶ್ವರೀ ರಾಜ್ಯದ) ಸ್ಥಾಪನೆಯ ಉದ್ಘೋಷ (೧೯೯೮)

೬. ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಸಂತರು, ಸಂಪ್ರದಾಯಗಳು, ಹಿಂದುತ್ವವಾದಿಗಳು ಮುಂತಾದವರ ಸಂಘಟನೆ ಹಾಗೂ ಅವರಿಗೆ ಮಾರ್ಗದರ್ಶನ !

**(ಸಂಪೂರ್ಣ ಪರಿಚಯಕ್ಕಾಗಿ ಭೇಟಿ ನೀಡಿ 'www.Sanatan.org/Kannada')**

**ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯರು ಸಾಧಕರಿಗೆ ನೀಡಿದ ಭರವಸೆ !**

**ಸ್ಥೂಲದೇಹಕ್ಕಿಹುದು ಸ್ಥಳಕಾಲಗಳ ಪರಿಮಿತಿ ।**
**ಹೇಗಿರಲಿ ಸದಾ ಎಲ್ಲ ಕಡೆಗಳಲ್ಲಿ ॥**
**ಸನಾತನ ಧರ್ಮವಿಹುದು ನನ್ನ ನಿತ್ಯರೂಪ ।**
**ಆ ರೂಪದಲ್ಲಿರುವೆ ಎಲ್ಲ ಕಡೆಗಳಲ್ಲಿ ಸದಾ ॥**

Jayant Balaji Athavale
17.5.1996

# ಸನಾತನದ ಸೂಕ್ಷ್ಮಜ್ಞಾನ ಪಡೆಯುವ ಸಾಧಕರ ಅದ್ವಿತೀಯತೆ !



ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಗಾಡಗೀಳ

ಸೂಕ್ಷ್ಮಜ್ಞಾನವನ್ನು ಪಡೆಯುವ ಸಾಧಕರು ಪೃಥ್ವಿಯ ಮೇಲೆ ಎಲ್ಲಿಯೂ ಲಭ್ಯವಿರದ ಅಧ್ಯಾತ್ಮದಲ್ಲಿನ ವಿವಿಧ ವಿಷಯಗಳಲ್ಲಿನ ಆಳವಾದ ಶಾಸ್ತ್ರೀಯ ಜ್ಞಾನವನ್ನು ಸೂಕ್ಷ್ಮದಿಂದ ಪಡೆಯುತ್ತಾರೆ. ಇವರು ಯಾವುದಾದರೊಂದು ಘಟನೆ, ಧಾರ್ಮಿಕ ವಿಧಿ, ಯಜ್ಞ ಯಾಗ ಇತ್ಯಾದಿಗಳ ಸೂಕ್ಷ್ಮ-ಪರೀಕ್ಷಣೆಯನ್ನೂ ಮಾಡುತ್ತಾರೆ. ಈಶ್ವರನಿಂದ ಸಿಗುವ ಸಾತ್ತ್ವಿಕ ಜ್ಞಾನವನ್ನು ಗ್ರಹಣ ಮಾಡಲು ಅವರಿಗೆ ಆಸುರೀ ಶಕ್ತಿಗಳ ಆಕ್ರಮಣವನ್ನೂ ಎದುರಿಸಬೇಕಾಗುತ್ತದೆ. ಹೀಗಿದ್ದರೂ ಅವರು ಗುರುಕೃಪೆಯ ಬಲದಿಂದ ಈ ಸೇವೆಯನ್ನು ಮಾಡುತ್ತಲೇ ಇದ್ದಾರೆ.

---

## ಗ್ರಂಥದ ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


**೧. ದೇವರ ಪೂಜೆಯ ತಯಾರಿಯನ್ನು ಮಾಡುವ ಕ್ರಮ** ೧೦

೧ ಅ. ದೇವರ ಪೂಜೆಯ ತಯಾರಿಯನ್ನು ಮಾಡುವಾಗ ವಿಶಿಷ್ಟ ಕ್ರಮಗಳಿರುವುದರ ಕಾರಣ ೧೦

**೨. ಪೂಜೆಯ ಮೊದಲು ಮಾಡಬೇಕಾದ ವೈಯಕ್ತಿಕ ತಯಾರಿಯ ಮಹತ್ವ** ೧೧

೨ ಅ. ಸಾತ್ತ್ವಿಕತೆಯು ಹೆಚ್ಚಾಗುವುದು ೧೧

೨ ಆ. ಹಿಂದೂ ಸಂಸ್ಕೃತಿಯ ರಕ್ಷಣೆಯಾಗುವುದು ೧೧

**೩. ಪೂಜೆಯ ಮೊದಲು ಮಾಡಬೇಕಾದ ವೈಯಕ್ತಿಕ ತಯಾರಿ (ಕೇವಲ ಕೃತಿಗಳು)** ೧೨

* ಸ್ನಾನ, ವಸ್ತ್ರಧಾರಣೆ, ಕೇಶರಚನೆ, ಆಭರಣ ಧರಿಸುವುದು, ಆಚಮನ, ಪ್ರಾಣಾಯಾಮ, ತಿಲಕಧಾರಣೆ ಮತ್ತು ಪೂಜೆಯ ಸಮಯದಲ್ಲಿ ಮಾಡಬೇಕಾದ ಕೆಲವು ಕೃತಿಗಳು ೧೨

**೪. ಪೂಜೆಯ ಮೊದಲು ಮಾಡಬೇಕಾದ ವೈಯಕ್ತಿಕ ತಯಾರಿಯ ಹಿಂದಿನ ಶಾಸ್ತ್ರ** ೧೭

೪ ಅ. ಸ್ನಾನವಾದ ಒಂದು ಗಂಟೆಯೊಳಗೆ ಪೂಜೆ ಪ್ರಾರಂಭಿಸಬೇಕು ೧೮

೪ ಆ. ಪೂಜೆ ಮಾಡುವಾಗ ಧರಿಸಬೇಕಾದ ಬಟ್ಟೆಗಳ ಸ್ವರೂಪ ಮತ್ತು ಅವುಗಳ ಶ್ರೇಷ್ಠತೆ ೧೮

೪ ಇ. ಪುರುಷರು ಧರಿಸಬೇಕಾದ ವಸ್ತ್ರಗಳು ೨೫

೪ ಈ. ಸ್ತ್ರೀಯರು ಮತ್ತು ಪುರುಷರು ಉಪಯೋಗಿಸಬೇಕಾದ ಬಟ್ಟೆಗಳು ೩೧

೪ ಉ. ಸ್ತ್ರೀ ಮತ್ತು ಪುರುಷರ ಕೇಶರಚನೆ ೫೩

೪ ಊ. ಪೂಜೆಯ ವಿಧಿಗಾಗಿ ಸ್ತ್ರೀಯರು ಮೈತುಂಬಾ ವಿವಿಧ ಆಭರಣ ಗಳನ್ನು ಹಾಕಿಕೊಳ್ಳುವುದು ಮತ್ತು ಪುರುಷರು ಕೇವಲ ಕೊರಳಲ್ಲಿ ಸರ ಮತ್ತು ಕೈಯಲ್ಲಿ ಉಂಗುರವನ್ನು ಹಾಕಿಕೊಳ್ಳುವುದು ಆವಶ್ಯಕ ೫೬

೪ ಎ. ಸ್ನಾನದ ನಂತರ ಪ್ರಾಣಾಯಾಮವನ್ನು ಏಕೆ ಮಾಡಬೇಕು ? ೫೮

೪ ಏ. ಪೂಜಕನು ತಿಲಕ ಅಥವಾ ಭಸ್ಮವನ್ನು ಹಚ್ಚಿಕೊಳ್ಳುವುದು ೫೯

**೫. ಶೀಘ್ರ ಈಶ್ವರಪ್ರಾಪ್ತಿಗಾಗಿ ಕೇವಲ ದೇವರಪೂಜೆ ಸಾಲದು, ಅದಕ್ಕೆ ಮುಂದಿನ ಹಂತದ ಸಾಧನೆಯನ್ನು ಮಾಡುವುದು ಆವಶ್ಯಕ ! ೮೭**

**೬. ದೇವತೆಗಳ ವಿಡಂಬನೆಯನ್ನು ತಡೆಗಟ್ಟುವುದು, ಕಾಲಾನುಸಾರ ಆವಶ್ಯಕ ಸಾಧನೆಯೇ ಆಗಿದೆ ! ೮೮**

**卐 ‘ಪೂಜೆಯ ಮೊದಲಿನ ವೈಯಕ್ತಿಕ ತಯಾರಿ’ಯ ಬಗ್ಗೆ ಇನ್ನೂ ಹೆಚ್ಚು ಸೂಕ್ಷ್ಮ ಸ್ತರದಲ್ಲಿನ ಅಧ್ಯಾತ್ಮಶಾಸ್ತ್ರದ ಜ್ಞಾನ ೯೦**

**卐 ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ ! ೯೨**

**卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ ೯೬**


**ಪರಾತ್ಪರ ಗುರು ಡಾ. ಜಯಂತ ಆಠವಲೆಯವರ**
**‘ಸಚ್ಚಿದಾನಂದ ಪರಬ್ರಹ್ಮ’ ಎಂಬ ಬಿರುದಿನ ಕುರಿತಾದ ವಿವೇಚನೆ !**

೧೩.೭.೨೦೨೨ ರಿಂದ ‘ಸಪ್ತರ್ಷಿ ಜೀವನಾಡಿಪಟ್ಟಿ’ಯ ವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಯಂತೆ ಪರಾತ್ಪರ ಗುರು ಡಾ. ಆಠವಲೆಯವರನ್ನು ‘ಸಚ್ಚಿದಾನಂದ ಪರಬ್ರಹ್ಮ’ ಎಂದು ಸಂಬೋಧಿಸಲಾಗುತ್ತಿದೆ. ಇದಕ್ಕೂ ಮೊದಲು ಗ್ರಂಥಗಳಲ್ಲಿ ಅವರನ್ನು ‘ಪ.ಪೂ. [ಪರಮ ಪೂಜ್ಯ]’ ಮತ್ತು ‘ಪರಾತ್ಪರ ಗುರು’ ಎಂಬ ಬಿರುದುಗಳಿಂದ ಸಂಬೋಧಿಸಲಾಗಿದೆ. ಇದಕ್ಕನುಸಾರ ಪ್ರಸ್ತುತ ಗ್ರಂಥದ ಮುಖಪುಟದಲ್ಲಿ ಮತ್ತು ಗ್ರಂಥದಲ್ಲಿ ಆವಶ್ಯಕವಿರುವ ಕಡೆ ಹೀಗೆ ಉಲ್ಲೇಖಿಸಲಾಗಿದೆ.

## ಗ್ರಂಥದ ಮನೋಗತ

ಹಿಂದೂ ಧರ್ಮವು ಮನುಷ್ಯಜೀವನದಲ್ಲಿನ ಪ್ರತಿಯೊಂದು ಕೃತಿಯಿಂದ ಚೈತನ್ಯವನ್ನು ಹೇಗೆ ಆಕರ್ಷಿಸಿಕೊಳ್ಳಬೇಕು ಎಂಬುದರ ಸವಿಸ್ತಾರ ವಿಚಾರವನ್ನು ಮಾಡಿದೆ, ಇದು ನಮ್ಮ ಸನಾತನ ಹಿಂದೂ ಧರ್ಮದಲ್ಲಿನ ಅದ್ವಿತೀಯ ವೈಶಿಷ್ಟ್ಯವಾಗಿದೆ. ಹಿಂದೂ ಧರ್ಮದಲ್ಲಿನ, ಜನ್ಮದಿಂದ ಮೃತ್ಯುವಿನವರೆಗಿನ ವಿವಿಧ ಸಂಸ್ಕಾರಗಳು, ಧಾರ್ಮಿಕ ಕೃತಿಗಳು, ಮೃತ್ಯೋತ್ತರ ಶ್ರಾದ್ಧಾದಿ ವಿಧಿ ಇತ್ಯಾದಿಗಳು ಈಶ್ವರಪ್ರಾಪ್ತಿಗೆ ಪೂರಕವಾಗಿವೆ ಮತ್ತು ದೇವರ ಪೂಜೆ, ಯಜ್ಞಯಾಗ ಮುಂತಾದ ಉಪಾಸನೆಯ ಪದ್ಧತಿಗಳು ಈಶ್ವರಪ್ರಾಪ್ತಿಯನ್ನು ಮಾಡಿಕೊಡುತ್ತವೆ. ದೇವರ ಪೂಜೆಯು ಮನೆಮನೆಗಳಲ್ಲಿ ನಿತ್ಯ ಆಚರಣೆಯಲ್ಲಿ ತರುವಂತಹ ಒಂದು ಸುಲಭ ಉಪಾಸನಾಪದ್ಧತಿಯಾಗಿದೆ. ದೇವರ ಪೂಜೆಯಿಂದ ಈಶ್ವರೀ ಚೈತನ್ಯವು ಸಹಜವಾಗಿ ಆಕರ್ಷಿಸುತ್ತದೆ. ಇಲ್ಲಿ ಗಮನದಲ್ಲಿಡಬೇಕಾದ ಒಂದು ಮಹತ್ವದ ವಿಷಯವೇನೆಂದರೆ ಪೂಜೆಯ ಮೊದಲು ಪೂಜಕನ ಸಾತ್ತ್ವಿಕತೆಯು ಎಷ್ಟು ಪ್ರಮಾಣದಲ್ಲಿ ಹೆಚ್ಚಾಗುತ್ತದೆಯೋ, ಅಷ್ಟೇ ಪ್ರಮಾಣದಲ್ಲಿ ಅವನು ಪೂಜೆಯಿಂದ ಈಶ್ವರೀ ಚೈತನ್ಯವನ್ನು ಗ್ರಹಿಸಲು ಸಕ್ಷಮನಾಗುತ್ತಾನೆ. ಪೂಜಕನ ಸಾತ್ತ್ವಿಕತೆಯು ಹೆಚ್ಚಾಗಲು ಅವನ ವೈಯಕ್ತಿಕ ತಯಾರಿಯು ಲಾಭದಾಯಕವಾಗಿದೆ.

ದೇವರ ಪೂಜೆಗೆ ತಯಾರಾಗುವಾಗ ಪುರುಷರು ಶರ್ಟ್‌ಪ್ಯಾಂಟ್‌ಗಿಂತ ಮಡಿವಸ್ತ್ರ- ಉಪವಸ್ತ್ರ ಮತ್ತು ಸ್ತ್ರೀಯರು ಆರು ಗಜದ ಸೀರೆಯ ಬದಲು ಒಂಬತ್ತು ಗಜದ ಸೀರೆಯನ್ನು ಏಕೆ ಉಟ್ಟುಕೊಳ್ಳಬೇಕು, ಪುರುಷರು ಉಪವಸ್ತ್ರವನ್ನು ಎಡಹೆಗಲಿನ ಮೇಲೆ ಏಕೆ ಹಾಕಿಕೊಳ್ಳಬೇಕು, ಸ್ತ್ರೀಯರು ತಲೆಯ ಮೇಲೆ ಸೆರಗನ್ನು ಏಕೆ ತೆಗೆದುಕೊಳ್ಳಬೇಕು ಮುಂತಾದ ಅನೇಕ ಪ್ರಶ್ನೆಗಳ ಅಧ್ಯಾತ್ಮಶಾಸ್ತ್ರೀಯ ಉತ್ತರಗಳನ್ನು ಈ ಗ್ರಂಥದಿಂದ ತಿಳಿದುಕೊಂಡರೆ ಪೂಜಕನಿಗೆ ವೈಯಕ್ತಿಕ ತಯಾರಿಯ ಮಹತ್ವವು ಗಮನಕ್ಕೆ ಬರುತ್ತದೆ. ಯಾವುದಾದರೊಂದು ಕೃತಿಯ ಮಹತ್ವವು ಗಮನಕ್ಕೆ ಬಂದರೆ ಆ ಕೃತಿಯು ಶ್ರದ್ಧೆಯಿಂದಾಗುತ್ತದೆ ಮತ್ತು ಇಂತಹ ಶ್ರದ್ಧಾಯುಕ್ತ ಕೃತಿಯಿಂದ ಉತ್ತಮ ಫಲಪ್ರಾಪ್ತಿಯಾಗುತ್ತದೆ. ಬಹಳಷ್ಟು ಜನರಿಗೆ ಪೂಜೆಯ ಮೊದಲು ಕುಂಕುಮ, ಗಂಧ, ಸಿಂಧೂರ, ಭಸ್ಮ ಮುಂತಾದವುಗಳನ್ನು ಹಚ್ಚಿಕೊಳ್ಳುವುದರ ಬಗ್ಗೆ ಗೊತ್ತಿರುತ್ತದೆ, ಆದರೆ ಅವುಗಳನ್ನು ನಿಶ್ಚಿತವಾಗಿ ಯಾವ ಸ್ಥಳದಲ್ಲಿ ಮತ್ತು ಹೇಗೆ ಹಚ್ಚಿಕೊಳ್ಳಬೇಕು ಎಂಬುದರ ಬಗ್ಗೆ ಮಾಹಿತಿಯಿರುವುದಿಲ್ಲ. ಪ್ರಸ್ತುತ ಗ್ರಂಥದಲ್ಲಿ ಇದರ ಬಗ್ಗೆ ಶಾಸ್ತ್ರಸಹಿತ ಮಾರ್ಗದರ್ಶನವನ್ನು ಮಾಡಲಾಗಿದೆ.

ಅಧ್ಯಾತ್ಮದಲ್ಲಿ 'ಭಾವವಿದ್ದಲ್ಲಿ ದೇವ' ಎಂಬ ಒಂದು ಮಹತ್ವದ

ಸಿದ್ಧಾಂತವಿದೆ. ದೇವರ ಪೂಜೆಯ ಮೊದಲು ಮಾಡಬೇಕಾದ ತಯಾರಿ ಮತ್ತು ದೇವರ ಪೂಜೆಗಳಿಂದ ಭಕ್ತಿಭಾವವು ನಿರ್ಮಾಣವಾಗಲು ಸಹಾಯವಾಗುತ್ತದೆ. ಎಲ್ಲಿಯವರೆಗೆ ಮುತ್ತು ಸರಿಯಾಗಿ ತಯಾರಾಗುವುದಿಲ್ಲವೋ, ಅಲ್ಲಿಯವರೆಗೆ ಅದರ ಚಿಪ್ಪು ಬಹಳ ಮಹತ್ವದ್ದಾಗಿರುತ್ತದೆ, ಆದರೆ ಒಂದು ಸಲ ಮುತ್ತು ತಯಾರಾದರೆ ಚಿಪ್ಪಿಗೆ ಏನೂ ಮಹತ್ವವಿರುವುದಿಲ್ಲ. ಅದರಂತೆಯೇ ಒಂದು ಸಲ ಭಾವ ನಿರ್ಮಾಣ ವಾಯಿತೆಂದರೆ ಅಥವಾ ಅಧ್ಯಾತ್ಮಿಕ ಮಟ್ಟವು ಹೆಚ್ಚಾಯಿತೆಂದರೆ ಪೂಜೆಯಲ್ಲಿನ ಕರ್ಮಕಾಂಡಗಳನ್ನು ಅಷ್ಟೊಂದು ಕಟ್ಟುನಿಟ್ಟಾಗಿ ಮಾಡುವ ಆವಶ್ಯಕತೆ ಇರುವುದಿಲ್ಲ. ಅದಕ್ಕಿಂತಲೂ ಮುಂದಿನ ಹಂತದಲ್ಲಿ ದೇವರ ಪೂಜೆಯನ್ನು ಮಾಡುವ ಆವಶ್ಯಕತೆಯೂ ಇರುವುದಿಲ್ಲ; ಏಕೆಂದರೆ ಇಂತಹ ಸಾಧಕರ ಮನಸ್ಸು ಯಾವಾಗಲೂ ಈಶ್ವರನ ಅನುಸಂಧಾನದಲ್ಲಿರುತ್ತದೆ; ಆದರೆ ಇಂತಹ ಸ್ಥಿತಿ ಪ್ರಾಪ್ತವಾಗುವವರೆಗೆ ಧರ್ಮಪಾಲನೆಯ ಒಂದು ಮಹತ್ವದ ಅಂಗವೆಂದು ದೇವರ ಪೂಜೆಯ ಮೊದಲಿನ ತಯಾರಿ ಮತ್ತು ದೇವರ ಪೂಜೆಯನ್ನು ಮಾಡಬೇಕು.

ಈ ಗ್ರಂಥವನ್ನು ಓದಿ ಪೂಜಕನ ವೈಯಕ್ತಿಕ ತಯಾರಿಯ ಮಹತ್ವವು ಗಮನಕ್ಕೆ ಬಂದು ಅದಕ್ಕನುಸಾರ ಪೂಜಕರಿಂದ ಕೃತಿಯಾಗಲಿ ಮತ್ತು ಅವರಿಗೆ ಈಶ್ವರೀ ಚೈತನ್ಯದಿಂದ ಅತ್ಯಧಿಕ ಲಾಭವಾಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ

**– ಸಂಕಲನಕಾರರು**

## ಯಾವುದಾದರೊಂದು ಧಾರ್ಮಿಕ ಕೃತಿಯ ಬಗ್ಗೆ ಜ್ಞಾನದಿಂದ ಪಡೆದ ಮಾಹಿತಿಯಲ್ಲಿ ಮತ್ತು ಧರ್ಮಶಾಸ್ತ್ರಗಳಲ್ಲಿ ಹೇಳಿದ ಮಾಹಿತಿಯಲ್ಲಿ ವ್ಯತ್ಯಾಸವಿರುವುದರ ಕಾರಣಗಳು

ಸಾಧಕರಿಗೆ ಈಶ್ವರೀ ಕೃಪೆಯಿಂದ ಪ್ರಾಪ್ತವಾದ ಜ್ಞಾನದಲ್ಲಿ ಹೇಳಲಾಗಿರುವ ಕೆಲವು ಧಾರ್ಮಿಕ ಕೃತಿಗಳು ಉದಾ. ಪೂಜೆಗೆ ಕುಳಿತುಕೊಳ್ಳುವಾಗ ಸ್ತ್ರೀಯರು ಮೈಮೇಲೆ ಶಾಲನ್ನು ತೆಗೆದುಕೊಳ್ಳಬೇಕು, ಪುರುಷರು ಬಲತೊಡೆಯ ಮೇಲೆ ರೇಷ್ಮೆಯ ಉಪವಸ್ತ್ರವನ್ನು ಇಟ್ಟುಕೊಳ್ಳಬೇಕು ಎಂಬುದನ್ನು ಪ್ರಚಲಿತ ಧರ್ಮಶಾಸ್ತ್ರದಲ್ಲಿ ಹೇಳಲಾಗಿಲ್ಲ. ಈಶ್ವರೀಜ್ಞಾನ ವನ್ನು ಸತ್ಯಯುಗದಿಂದ ಪ್ರಾರಂಭವಾದ ಯುಗಗಳ ವಿಚಾರವನ್ನು ಮಾಡಿ ನೀಡಲಾಗಿರುತ್ತದೆ. ಧರ್ಮಸಿದ್ಧಾಂತಗಳು ತ್ರಿಕಾಲಾಬಾಧಿತ ವಾಗಿರುತ್ತವೆ, ಆದರೆ ಧರ್ಮಾಚರಣೆಯ ನಿಯಮಗಳು ಕಾಲಾನುಸಾರ ಬದಲಾಗು ತ್ತಿರುತ್ತವೆ ಎಂಬುದು ಅಧ್ಯಾತ್ಮಶಾಸ್ತ್ರದ ಒಂದು ಮಹತ್ವದ ತತ್ತ್ವವಾಗಿದೆ. ಇದಕ್ಕನುಸಾರ ಹಿಂದಿನ ಯುಗಗಳಲ್ಲಿನ ಕೆಲವು ಪದ್ಧತಿಗಳಲ್ಲಿ ಸದ್ಯದ ಕಲಿಯುಗದಲ್ಲಿ ಕೆಲವು

ಬದಲಾವಣೆಗಳಾಗಿವೆ. ಇದರ ಒಂದು ಉದಾಹರಣೆ ಎಂದರೆ ಹಿಂದಿನ ಕಾಲದಲ್ಲಿ ಲಂಗ-ರವಕೆಯು ಸ್ತ್ರೀಯರ ವೇಷಭೂಷಣವಾಗಿತ್ತು. ಆದುದರಿಂದ ಪೂಜೆಯ ಸಮಯದಲ್ಲಿ ಮೈಮೇಲೆ ಶಾಲನ್ನು ತೆಗೆದುಕೊಳ್ಳುತ್ತಿದ್ದರು. ಪ್ರಸ್ತುತ ಸ್ತ್ರೀಯರು ಸೀರೆಯನ್ನು ಉಟ್ಟುಕೊಳ್ಳುವುದರಿಂದ ಪೂಜೆಯ ಸಮಯದಲ್ಲಿ ಶರೀರದ ಮೇಲೆ ಶಾಲನ್ನು ತೆಗೆದುಕೊಳ್ಳದೇ ಸೀರೆಯ ಸೆರಗನ್ನೇ ತೆಗೆದುಕೊಳ್ಳುತ್ತಾರೆ.

ಬೇರೆಬೇರೆ ಸಂತರು ಹೇಳುವ ಈಶ್ವರಪ್ರಾಪ್ತಿಯ ಮಾರ್ಗಗಳು ಬೇರೆಬೇರೆಯಾಗಿದ್ದರೂ ಕೊನೆಗೆ ಅವು ಈಶ್ವರಪ್ರಾಪ್ತಿಯ ದಿಶೆಯಲ್ಲಿಯೇ ಕೊಂಡೊಯ್ಯುತ್ತವೆ. ಅದರಂತೆಯೇ ಜ್ಞಾನದಲ್ಲಿ ಹೇಳಲಾಗಿರುವ ಕೆಲವು ಧಾರ್ಮಿಕ ಕೃತಿಗಳನ್ನು ಆಚರಿಸುವ ಪದ್ಧತಿಗಳು ಬೇರೆಬೇರೆಯಾಗಿದ್ದರೂ ಧಾರ್ಮಿಕ ಕೃತಿಗಳಿಂದ ಆದಷ್ಟು ಹೆಚ್ಚು ಈಶ್ವರೀ ತತ್ತ್ವದ ಲಾಭ ಸಿಗಬೇಕೆಂಬುದೇ ಅದರ ಮುಖ್ಯ ಉದ್ದೇಶವಾಗಿರುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಅದರ ಹಿಂದಿನ ಶಾಸ್ತ್ರವನ್ನು ಅಧ್ಯಯನ ಮಾಡಬೇಕು. ಆದುದರಿಂದಲೇ ಪ್ರಸ್ತುತ ಕೆಲವೊಂದು ಪದ್ಧತಿಗಳು ರೂಢಿಯಲ್ಲಿ ಇಲ್ಲದಿದ್ದರೂ, ಆ ಧಾರ್ಮಿಕ ಕೃತಿಗಳನ್ನು ಮತ್ತು ಅವುಗಳ ಹಿಂದಿನ ಶಾಸ್ತ್ರವನ್ನು ಈ ಗ್ರಂಥದಲ್ಲಿ ನೀಡಲಾಗಿದೆ. ಅವುಗಳನ್ನು ಉಲ್ಲೇಖಿಸುವಾಗ 'ಒಂದು ಬೇರೆ ವಿಚಾರ ಸರಣಿಗನುಸಾರ ದೃಷ್ಟಿಕೋನ' ಎಂದು ಆಯಾ ಜಾಗದಲ್ಲಿ ಉಲ್ಲೇಖಿಸಲಾಗಿದೆ.

## ಸನಾತನದ ಇಬ್ಬರೂ ಸದ್ಗುರುಗಳ ಹೆಸರಿಗೆ ವಿಶಿಷ್ಟ ಆಧ್ಯಾತ್ಮಿಕ ಬಿರುದು ಸೇರಿಸಿರುವುದರ ಹಿಂದಿನ ಕಾರಣ

ನಾಡಿಪಟ್ಟಿವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಗನುಸಾರ ೧೩.೫.೨೦೨೦ ರಿಂದ ಸದ್ಗುರು (ಸೌ.) ಬಿಂದಾ ನೀಲೇಶ ಸಿಂಗಬಾಳರನ್ನು 'ಶ್ರೀಸತ್‌ಶಕ್ತಿ (ಸೌ.) ಬಿಂದಾ ನೀಲೇಶ ಸಿಂಗಬಾಳ' ಮತ್ತು ಸದ್ಗುರು (ಸೌ.) ಅಂಜಲಿ ಮುಕುಲ ಗಾಡಗೀಳರನ್ನು 'ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಮುಕುಲ ಗಾಡಗೀಳ' ಎಂದು ಸಂಬೋಧಿಸಲಾಗುತ್ತಿದೆ. ಈ ಇಬ್ಬರೂ ಸಂತರು ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ಆಧ್ಯಾತ್ಮಿಕ ಉತ್ತರಾಧಿಕಾರಿಗಳಾಗಿದ್ದಾರೆ.

### ವಾಚಕರಿಗೆ ವಿನಂತಿ !

'ಈ ಗ್ರಂಥದಲ್ಲಿನ ಸೂಕ್ಷ್ಮ ಪರೀಕ್ಷಣೆ, ಸೂಕ್ಷ್ಮಜ್ಞಾನದ ಚಿತ್ರಗಳನ್ನು 'ಮಹರ್ಷಿ ಅಧ್ಯಾತ್ಮ ವಿಶ್ವವಿದ್ಯಾಲಯ'ದ ಸೌಜನ್ಯದಿಂದ ತೆಗೆದುಕೊಳ್ಳಲಾಗಿದೆ.' – **ಪ್ರಕಾಶಕರು**